**PAPER CLIPPINGS**

16

ಇಲಾಖೆ / ವಿಷಯ : DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 15/12/20

# ಬೆಂಗಳೂರು ಜತೆ ಅವಿನಾಭಾವ ನಂಟು

ಉ.ವಾ. 15-12-2020

ಬೆಂಗಳೂರು: ಪ್ರೊ.ರೊದ್ದಂ ನರಸಿಂಹ ಅವರಿಗೂ ಹಾಗೂ ಅವರ ಕಾರ್ಯಕ್ಷೇತ್ರ
ಏರೋಸ್ಪೇಸ್‌ಗೂ ಮತ್ತು ಉದ್ಯಾನನಗರಿಗೂ ಅವಿನಾಭಾವ ಸಂಬಂಧ ಇದೆ. ಇನ್ನೂ
ಒಂದು ಹೆಜ್ಜೆ ಮುಂದೆಹೋಗಿ ಹೇಳುವುದಾದರೆ, ರೊದ್ದಂ ಅವರನ್ನು ವೈಮಾನಿಕ
ಕ್ಷೇತ್ರಕ್ಕೆ ಎಳೆದುತಂದಿದ್ದೇ ಬೆಂಗಳೂರು.
ಹೌದು, ಅದು ಎರಡನೇ ಮಹಾಯುದ್ಧದ ಸಮಯ. ಎರಡು ಬಲಾಢ್ಯ
ದೇಶಗಳು ಕಾದಾಟಕ್ಕೆ ಇಳಿದಿದ್ದವು. ಯುದ್ಧದಲ್ಲಿ ಕಾದಾಡಿ ದಣಿವ ಲೋಹದಹಕ್ಕಿಗಳು
ವಿಶ್ರಾಂತಿಗಾಗಿ ಬೆಂಗಳೂರಿಗೆ ಬರುತ್ತಿದ್ದವು. ಅವುಗಳ ರಿಪೇರಿ, ನಿರ್ವಹಣೆ ಇಲ್ಲಿ
ನಡೆಯುತ್ತಿತ್ತು. ಆಗ ರೊದ್ದಂ ನರಸಿಂಹ ಅವರು ಪುಟ್ಟ ಬಾಲಕ. ಆಗ ಅವುಗಳನ್ನು
ಬೆರಗುಗಣ್ಣುಗಳಿಂದ ನೋಡುತ್ತಿದ್ದರಂತೆ ರೊದ್ದಂ. ಇದನ್ನು ಸ್ವತಃ ಈ ಹಿಂದೆ
'ಉದಯವಾಣಿ'ಯೊಂದಿಗೆ ಹಂಚಿಕೊಂಡಿದ್ದರು.
ಏರೋ ಇಂಡಿಯಾ ಶೋ ಉತ್ತರ ಪ್ರದೇಶಕ್ಕೆ ಸ್ಥಳಾಂತರದ ಸುದ್ದಿಗಳು ಬಂದಾಗ,
ರೊದ್ದಂ ಈ ಬಗ್ಗೆ ಬೇಸರ ವ್ಯಕ್ತಪಡಿಸಿದ್ದರು. ಜತೆಗೆ ಬೆಂಗಳೂರಿನಲ್ಲಿಯೇ ಯಾಕೆ
ನಡೆಯಬೇಕು ಎಂಬುದಕ್ಕೆ ವೈಜ್ಞಾನಿಕ ಕಾರಣಗಳನ್ನೂ ನೀಡಿದ್ದರು. ಅವರೊಂದಿಗೆ
ನಡೆಸಿದ ಚುಟುಕು ಮಾತುಕತೆ ಇಲ್ಲಿದೆ.
ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಯುದ್ಧ ವಿಮಾನಗಳನ್ನು ಎಲ್ಲಿ
ನಿಲ್ಲಿಸುವುದು ಎಂಬ ಚಿಂತೆ ಬ್ರಿಟಿಷರನ್ನು ಕಾಡುತ್ತಿತ್ತು. ಆಗ ಆಯ್ಕೆ ಮಾಡಿಕೊಂಡಿದ್ದು
ಭಾರತವನ್ನು, ಅದರಲ್ಲೂ ಬೆಂಗಳೂರು ಸೂಕ್ತ ಎಂಬ ನಿರ್ಧಾರಕ್ಕೆ ಬಂದರು. ಇದಕ್ಕೂ
ಮುನ್ನ ಮದ್ರಾಸ್ ಆಯ್ಕೆಯಾಗಿತ್ತು. ಆದರೆ, ಅಲ್ಲಿ ಹಡಗುಗಳಿಂದ ವಿಮಾನವೊಂದನ್ನು
ಸ್ಫೋಟಿಸಿದ ಘಟನೆಯೂ ನಡೆಯಿತು. ಆದ್ದರಿಂದ ಕಡಲ ತೀರಗಳಿಲ್ಲದ ಹಾಗೂ
ರೆಸಿಡೆಂಟ್ ಮತ್ತು ಕಂಟೋನ್‌ಮೆಂಟ್ ಇರುವ ಬೆಂಗಳೂರು ಬೆಸ್ಟ್ ಎಂಬ
ನಿರ್ಣಯಕ್ಕೆ ಬರಲಾಯಿತು. ಯುದ್ಧ ಮುಗಿಸಿದ ವಿಮಾನಗಳು ಈಗಿನ ಎಚ್.
ಎಎಲ್‌ನಲ್ಲಿ ಬಂದು ನಿಲ್ಲುತ್ತಿದ್ದವು. ಅವುಗಳನ್ನು ನಗರದ ಜನ ಕಣ್ಣರಳಿಸಿ
ನೋಡುತ್ತಿದ್ದರು. ಅವರಲ್ಲಿ ನಾನೂ ಒಬ್ಬನಾಗಿದ್ದೆ. ಆಗ ನನಗೆ ಬಹುಶಃ ಆರು ವರ್ಷ.
'ಹೀಗೆ ಬಂದು ನಿಲ್ಲುವ ಯುದ್ಧ ವಿಮಾನಗಳ ರಿಪೇರಿಗೆ ಜನರೂ ಬೇಕಾಯಿತು.
ಆಗ, ಸ್ಥಳೀಯರಿಗೆ ಆಹ್ವಾನ ಬಂದಿತು. ಈ ಮೂಲಕ ವೈಮಾನಿಕ ಕ್ಷೇತ್ರದಲ್ಲಿ ಅವಕಾಶಗಳ
ಬಾಗಿಲು ತೆರೆಯಿತು. ನಮ್ಮ ಜತೆಗಿನವರೊಬ್ಬರು ವಿಮಾನಗಳ ರಿಪೇರಿ ಕೆಲಸಕ್ಕೆ
ಹೋಗುತ್ತಾರೆ ಎನ್ನುವುದೇ ಒಂದು ರೀತಿಯ ಬೆರಗು. ಮತ್ತೊಂದೆಡೆ ಖಾಸಗಿ
ಕಂಪನಿಯಾಗಿದ್ದ ವಾಲ್‌ಚಂದ್ ಹೀರಾಚಂದ್ ಮುಂದೆ ಸರ್ಕಾರಿ ಸ್ವಾಮ್ಯದ ಸಂಸ್ಥೆ
ಎಚ್‌ಎಎಲ್ ಆಯಿತು. ಬೇರೆ ದೇಶಗಳಿಂದ ವಿಮಾನಗಳನ್ನು ತರುವ ಬದಲಿಗೆ ನಾವೇ



ಯಾಕೆ ತಯಾರಿಸಬಾರದು ಎಂಬ ಆಲೋಚನೆ ಬಂತು. ಇದಕ್ಕೆ ಪೂರಕವಾಗಿ
ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ 1942ರಲ್ಲಿ ಏರೋನಾಟಿಕ್ಸ್ ವಿಭಾಗವೂ ಆರಂಭವಾ
ಯಿತು. ಹಾಗೆಯೇ ನನಗೂ ಅದರ ಬಗ್ಗೆ ಆಸಕ್ತಿ ಬೆಳೆಯಲು ಶುರುವಾಯಿತು.
40ರ ದಶಕದಲ್ಲಿ "sea plane' (ಸಮುದ್ರ ವಿಮಾನ)ಗಳು ಬಂದಿಳಿಯುತ್ತಿದ್ದವು!
ಅಚ್ಚರಿಯಾದರೂ ಇದು ನಿಜ. ಬೆಳ್ಳಂದೂರು ಕೆರೆ ಅತ್ಯಂತ ದೊಡ್ಡದಾಗಿದ್ದು
ಸರೋವರದಂತೆ ಇತ್ತು. ಹಾಗಾಗಿ, ಯುದ್ಧ ವಿಮಾನಗಳನ್ನು ಬ್ರಿಟಿಷರು ಆ ಕೆರೆಯ
ಮೂಲಕ ತಂದಿಳಿಸುತ್ತಿದ್ದರು. ಇನ್ನೂ ವಿಶೇಷವೆಂದರೆ, ಎಚ್‌ಎಎಲ್ ಅನ್ನೇ ಆಯ್ಕೆ
ಮಾಡಲು ಈ ಕೆರೆಯೂ ಒಂದು ಕಾರಣವಾಗಿತ್ತು. ಆದರೆ, ಆ ಕೆರೆಯೇ ಈಗ
ಕಲುಷಿತಗೊಂಡು, ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗುತ್ತಿದೆ.
ಈಗ 2021ರ ಏರೋ ಇಂಡಿಯಾ ಶೋಗೆ ಸಿದ್ಧತೆಗಳು ನಡೆಯುತ್ತಿವೆ. ಮತ್ತೆ
ವಿದೇಶಗಳಿಂದ ಲೋಹದ ಹಕ್ಕಿಗಳು ಹಾರಿಬರಲಿವೆ. ಆದರೆ, ರೊದ್ದಂ ಅವರ ಪ್ರಾಣ
ಪಕ್ಷಿಯೇ ಹಾರಿಹೋಗಿದೆ.

## ವಿಜ್ಞಾನಿ ರೊದ್ದಂ ನರಸಿಂಹ ಇನ್ನಿಲ್ಲ

ಬೆಂಗಳೂರು: ಮೆದುಳು ರಕ್ತಸ್ರಾವ(ಬ್ರೈನ್ ಹೆಮರೇಜ್)ನಿಂದ ಬಳಲುತ್ತಿದ್ದ
ದೇಶದ ಹಿರಿಯ ಬಾಹ್ಯಾಕಾಶ ವಿಜ್ಞಾನಿ ಹಾಗೂ ಪದ್ಮವಿಭೂಷಣ ವಿಜೇತ
ರೊದ್ದಂ ನರಸಿಂಹ(87) ಅವರು ಸೋಮವಾರ ರಾತ್ರಿ ನಿಧನರಾಗಿದ್ದಾರೆ.
ಬ್ರೈನ್ ಹೆಮರೇಜ್ ಸಮಸ್ಯೆಯಿಂದ ಬಳಲುತ್ತಿದ್ದ ನರಸಿಂಹ ಅವರು
ಕೆಲವು ತಿಂಗಳ ಹಿಂದೆ ಶಸ್ತ್ರಚಿಕಿತ್ಸೆಗೊಳಗಾಗಿದ್ದರು. ಆದರೆ, ಚಿಕಿತ್ಸೆ
ಫಲಕಾರಿಯಾಗದೆ ಸೋಮವಾರ ರಾತ್ರಿ ಖಾಸಗಿ ಆಸ್ಪತ್ರೆಯಲ್ಲಿ
ನಿಧನರಾಗಿದ್ದಾರೆ. ಮೃತರಿಗೆ ಪತ್ನಿ ಮತ್ತು ಮಗಳು ಇದ್ದಾರೆ.
1933 ಜುಲೈ 20ರಂದು ಜನಿಸಿದ ರೊದ್ದಂ ನರಸಿಂಹ ಅವರು,
ಮೈಸೂರಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ, ಭಾರತೀಯ ವಿಜ್ಞಾನ
ಸಂಸ್ಥೆ(ಐಐಎಸ್‌ಸಿ)ಯಲ್ಲಿ ಸ್ನಾತಕೋತ್ತರ ಪದವಿ ಪಡೆದುಕೊಂಡಿದ್ದರು.
ಅನಂತರ ಅದೇ ಭಾರತೀಯ ಬಾಹ್ಯಾಕಾಶ ವಿಜ್ಞಾನಿಯಾಗಿದ್ದ ಅವರು ಹಿಂದೆ
ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ(ಐಐಎಸ್‌ಸಿ) ಏರೋಸ್ಪೇಸ್
ಎಂಜಿನಿಯರಿಂಗ್‌ನ ಪ್ರಾಧ್ಯಾಪಕರಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದರು.
ಬಳಿಕ ಫ್ಲೂಯಿಡ ಮೆಕಾನಿಕ್ಸ್, ಏರೋಸ್ಪೇಸ್ ಎಂಜಿನಿಯರಿಂಗ್,
ಅಟ್ಮಾಸ್ಫರಿಕ್ ಸೈನ್ಸ್ ಅವರ ಸಂಶೋಧನಾ ಕ್ಷೇತ್ರಗಳಾಗಿದ್ದವು. ಅಮೆರಿಕಾದ
ಕ್ಯಾಲಿಫೋರ್ನಿಯಾ ಇನ್ಸ್ಟಿಟ್ಯೂಟ್ ಟೆಕ್ನಾಲಜಿಯಲ್ಲಿ ಪಿಎಚ್‌ಡಿ ಪಡೆದುಕೊಂಡಿ
ದ್ದಾರೆ. ಅಲ್ಲದೆ ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರಿ (ಎನ್‌ಎಎಲ್)
ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (ನಿಯಾಸ್),
ಇಂಡಿಯನ್ ನ್ಯಾಷನಲ್ ಸೈನ್ಸ್ ಅಕಾಡೆಮಿ(ಐಎನ್‌ಎಸ್‌ಎ)ನಲ್ಲಿ
ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಹಿಂದೂಸ್ತಾನ್ ಏರೋನಾಟಿಕ್ಸ್
ಲಿಮಿಟೆಡ್(ಎಚ್‌ಎಎಲ್)ನಲ್ಲಿ ಯೋಜನಾ ಸಂಯೋಜಕರಾಗಿದ್ದರು.
ಮುಂದುವರೆದ ವೈಜ್ಞಾನಿಕ ಸಂಶೋಧನೆಗಾಗಿ ಬೆಂಗಳೂರಿನಲ್ಲಿರುವ
ಜವಾಹರಲಾಲ್ ನೆಹರೂ ಕೇಂದ್ರದ ಮೆಕಾನಿಕ್ಸ್ ಘಟಕದ
ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಹೈದರಾಬಾದ್‌ನ ಪ್ರತಿಷ್ಠಿತ ವಿಜ್ಞಾನ
ಮತ್ತು ಎಂಜನಿಯರಿಂಗ್ ಸಂಸ್ಥೆ ಸೇರಿ ಹಲವು ವಿಜ್ಞಾನ ಸಂಸ್ಥೆಗಳಲ್ಲಿ ಸೇವೆ
ಸಲ್ಲಿಸಿದ್ದರು. ಅಲ್ಲದೆ, ಭಾರತೀಯ ವಿಜ್ಞಾನ ಕ್ಷೇತ್ರಕ್ಕೆ ಅಪಾರ ಸೇವೆ
ಸಲ್ಲಿಸಿರುವ ರೊದ್ದಂ ನರಸಿಂಹ ಅವರು ಇಸ್ರೋ ಮತ್ತು ಲಘು ಯುದ್ಧ
ವಿಮಾನ(ಎಲ್‌ಸಿಎ)ಗೂ ಕೊಡುಗೆ ನೀಡಿದ್ದಾರೆ. ವಿಜ್ಞಾನ ಕ್ಷೇತ್ರಕ್ಕೆ ಅವರ
ಅಪಾರ ಸೇವೆ ಪರಿಗಣಿಸಿ ಭಾರತ ಸರ್ಕಾರ 2013ರಲ್ಲಿ ದೇಶದ ಎರಡನೇ
ನಾಗರೀಕ ಪ್ರಶಸ್ತಿ ಪದ್ಮವಿಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ.